5) ಗ್ರಾಮೀಣ ಕುಶಲಕರ್ಮಿಗಳಿಗೆ ಗುಂಪು (ವಿಮಾ) ಯೋಜನೆ.

6) ಗುಂಪು ಉಳಿತಾಯ ಆಧಾರಿತ ವಿಮಾ ಯೋಜನೆ.

7) ನೇಕಾರರ ಆಶಾ ಜ್ಯೋತಿ ಯೋಜನೆ.

8) ವಿಶ್ವ ಕಾರ್ಯಕ್ರಮ.

ಇದಲ್ಲದೆ, ಕರ್ನಾಟಕ ರಾಜ್ಯ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ಮುಖಾಂತರ ಸರ್ಕಾರವು ಅಗ್ಗದರದ ಸೀರೆ ಧೋತಿ ಯೋಜನೆ ಮತ್ತು ಶಿಕ್ಷಣ ಇಲಾಖೆಯ ವಿದ್ಯಾ ವಿಕಾಸ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದ್ದು, ತನ್ಮೂಲಕ ನೇಕಾರರಿಗೆ ನಿರಂತರ ಉದ್ಯೋಗ ಒದಗಿಸಿ ಅವರ ಮತ್ತು ಅವರ ಕುಂಟುಂಬ ವರ್ಗಕ್ಕೆ ಜೀವನೋಪಾಯವನ್ನು ಒದಗಿಸಲಾಗುತ್ತಿದೆ.

ಕೇಂದ್ರ ಸರ್ಕಾರವು ರಾಜ್ಯ ಸರ್ಕಾರಕ್ಕೆ ಇದುವರೆಗೆ ರೂ. 1562.48 ಲಕ್ಷಗಳನ್ನು ಬಿಡುಗಡೆ ಮಾಡಿದ್ದು, ಈ ಮೊತ್ತವನ್ನು ನೇಕಾರರ ಅಭಿವೃದ್ಧಿಗಾಗಿ ಉಪಯೋಗಿಸಿ ಕೊಳ್ಳಲಾಗಿರುತ್ತದೆ.

ಇ) ಅನ್ವಯಿಸುವುದಿಲ್ಲ.

3405A(4142) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ):- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ಧರ್ಮಸ್ಥಳದಿಂದ ಮುಳಿಕ್ಕಾರ ಗಿರಿಜನ ಕಾಲೋನಿಗೆ ಹೋಗುವ ರಸ್ತೆಯ ಡಾಂಬರೀಕರಣಕ್ಕೆ ಸಮಾಜ ಕಲ್ಯಾಣ ಇಲಾಖೆಯವರು ವಿಶೇಷ ಅನುದಾನ ನೀಡುವ ಬಗ್ಗೆ ಕ್ರಮ ಜರುಗಿಸಲಾಗಿದೆಯೇ;

2) ಹಾಗಿದ್ದಲ್ಲಿ, ಮಂಜೂರಾದ ಮೊತ್ತವೆಷ್ಟು; ಹಾಗಿಲ್ಲದಿದ್ದಲ್ಲಿ, ಆ ಕುರಿತು ಸರ್ಕಾರದ ಕ್ರಮವೇನು ?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು):-

1) ಇಲ್ಲ.

2) ಉದ್ಭವಿಸುವುದಿಲ್ಲ.

3406(4143) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ಧರ್ಮಸ್ಥಳ ಪ್ರದೇಶದ ಮಳಿಕ್ಕಾರ ಗಿರಿಜನ ಕಾಲೋನಿಯ ನೀರಾವರಿಗಾಗಿ ವಿದ್ಯುತ್ ಸಂಪರ್ಕ ನೀಡುವ ಯೋಜನೆಯು ಪೂರ್ಣಗೊಂಡಿದೆಯೇ; ಹಾಗಿಲ್ಲದಿದ್ದಲ್ಲಿ, ಯಾವಾಗ ಪೂರ್ಣಗೊಳಿಸಲಾಗುವುದು;

ಅ) ಅಲ್ಲಿ ಅನುಷ್ಠಾನಗೊಳಿಸಲಾಗುತ್ತಿರುವ ಗಂಗಾ ಕಲ್ಯಾಣ ಯೋಜನೆಯನ್ನು ಪ್ರಗತಿಯಲ್ಲಿ ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುವುದೇ;

ಆ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಗಂಗಾ ಕಲ್ಯಾಣ ಯೋಜನೆಯನ್ನು ಯಾವ ಯಾವ ಪ್ರದೇಶಗಳಲ್ಲಿ ಅನುಷ್ಠಾನಗೊಳಿಸಲು ಯಾವಾಗ ಜಾರಿಗೆ ತರಲಾಗುವುದು?

ಶ್ರೀ ಹಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :—

ಅ), ಆ) ಕರ್ನಾಟಕ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮವು ಅನುಷ್ಠಾನಗೊಳಿಸುತ್ತಿರುವ ಗಂಗಾ ಕಲ್ಯಾಣ ಯೋಜನೆಯಡಿ ಕೊರೆಯುವ ಕೊಳವೆಬಾವಿಗಳಿಗೆ ವಿದ್ಯುದ್ದೀಕರಿಸಲು ಕ್ರಮ ತೆಗೆದುಕೊಳ್ಳುತ್ತಿದೆ. ಈ ಯೋಜನೆಯಡಿಯಲ್ಲಿ ಧರ್ಮಸ್ಥಳ ಪ್ರದೇಶದ ಮಳಿಕ್ಕಾರ ಗಿರಿಜನ ಕಾಲೋನಿಯಲ್ಲಿ ಯಾವುದೇ ಕೊಳವೆ ಬಾವಿಯನ್ನು ಕೊರೆದಿರುವುದಿಲ್ಲ.

ಇ) ಪ್ರಸ್ತುತ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನಲ್ಲಿ ಈ ಕೆಳಗೆ ತಿಳಿಸಿರುವ ಪ್ರದೇಶದಲ್ಲಿ ಅರ್ಜಿದಾರರನ್ನು ಗುರ್ತಿಸಲಾಗಿದೆ.

1) ಕಣಿಯೂರು ಗ್ರಾಮದ ಪೇರಡ್ಕ
2) ಕಣಿಯೂರು ಗ್ರಾಮದ ಪಿಲಿಗೋಡ್
3) ಪುತ್ತಿಲ ಗ್ರಾಮದ ಕರ್ಪಾಡಿ
4) ತಣ್ಣೀರು ಪಂಥದ ಕಲ್ಲಕಟ್ಟೆಣೆ ಮತ್ತು ನರಿಯಾ
5) ಕರಾಯ ಗ್ರಾಮದ ಮುದಲೆಗುಂಡ
6) ಉರುವಲು ಗ್ರಾಮದ ನಕ್ಕೀಲು
7) ಕಕ್ಕಡಚಿಟ್ಟು ಗಿರಿಜನ ಕಾಲೋನಿ

ಜನವರಿ ಮಾಹೆಯೊಳಗೆ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಕೊಳವೆಬಾವಿಗಳನ್ನು ಕೊರೆಯಲು ಸಾಧ್ಯವಾಗದಿದ್ದಲ್ಲಿ ತೋಡುಬಾವಿಗಳನ್ನು ತೋಡಲು ಕ್ರಮಕೈಗೊಳ್ಳಲಾಗುವುದು.